<u>ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.ಗಳ ನ್ಯಾಯಾಲಯ, ಶೋರಾಪುರ.</u>

**ಸಿ.ಸಿ. ನಂ.218/2019**

| | | | |
|---|---|---|---|
| ಸಾಕ್ಷಿದಾರರ ಹೆಸರು | ಃ | ರೇವಣಸಿದ್ದಯ್ಯ | ಸಿ.ಡಬ್ಲ್ಯೂ ಃ 1 |
| ತಂದೆ ಹೆಸರು | ಃ | ಭದ್ರಯ್ಯ | ಪಿ.ಡಬ್ಲ್ಯೂ ಃ 1 |
| ವಯಸ್ಸು | ಃ | 42 ವರ್ಷ | |
| ವೃತ್ತಿ | ಃ | ಪ್ರಥಮ ದರ್ಜೆ ಸಹಾಯಕರು<br>ಸಹಕಾರ ಇಲಾಖೆ | |
| ವಾಸ ಸ್ಥಳ | ಃ | ಕಲಬುರಗಿ | |

**<u>ಸಾಕ್ಷಿಗೆ ಇಂದು ದಿನಾಂಕಃ 29.08.2023 ರಂದು ಪ್ರಮಾಣವಚನ ಭೋಧಿಸಲಾಯಿತು</u>**

**ಮುಖ್ಯ ವಿಚಾರಣೆಃ ಸ.ಸ.ಅ.ರವರಿಂದಃ**

ನಾನು 2002 ರಿಂದ 2015 ರವರೆಗೆ ಯಾದಗಿರಿಯ ಸಹಕಾರ ಸಂಘಗಳ ಸಹಾಯಕ ನಿಭಂದಕರ ಕಚೇರಿಯಲ್ಲಿ ದ್ವಿತೀಯ ದರ್ಜೆ ಸಹಾಯಕನಾಗಿ ಕೆಲಸ ಮಾಡಿದ್ದೇನೆ. ಆ ಅವಧಿಯಲ್ಲಿ ಆರೋಪಿ-1 ರವರು ಪ್ರಾಥಮಿಕ ಸಹಕಾರ ಸಂಘ ಏವೂರನ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದರು. ಆರೋಪಿ-2 ರವರು ಅದರ ಅದ್ಯಕ್ಷರಾಗಿದ್ದರು. ಆ ಅವಧಿಯಲ್ಲಿ ಏವೂರ ಪ್ರಾಥಮಿಕ ಸಹಾಕರ ಸಂಘದಲ್ಲಿ ಬೆಳೆ ವಿಮೆ ಹಣ ದುರುಪಯೋಗವಾಗಿದ್ದು ಆ ಕಾರಣ ನನಗೆ ನಮ್ಮ ಇಲಾಖೆಯಿಂದ ಅಧಿಕಾರ ಪತ್ರ ನೀಡಿ ದೂರು ದಾಖಲಿಸುವಂತೆ ಆದೇಶಿಸಿದ್ದರಿಂದ ದೂರು ದಾಖಲಿಸಿರುತ್ತೇನೆ. ಈಗ ನನಗೆ ತೋರಿಸುತ್ತಿರುವ ದೂರನ್ನು ನಿಪಿ-1 ಇದರ ಮೇಲಿರುವ ನನ್ನ ಸಹಿಯನ್ನು ನಿಪಿ-1 (ಎ) ಅಂತ ಗುರುತಿಸಲಾಯಿತು. ಈಗ ನನಗೆ ತೋರಿಸುತ್ತಿರುವ ಅಧಿಕಾರ ಪತ್ರವನ್ನು ನಿಪಿ-2 ಅಂತ ಗುರುತಿಸಲಾಯಿತು.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಸ.ಸ.ಅ ರವರ ವಿನಂತಿ ಮೇರೆಗೆ ಪರಿಗಣೆಸಿ ಪಾಟೀ ಸವಾಲಿಗೆ ಅವಕಾಶ ನೀಡಲಾಯಿತು.)**

**ಪಾಟೀ ಸವಾಲು ಃ ಅಭೀಯೊಜನೆ ಪರ ಸ.ಸ.ರವರಿಂದಃ**

ಏವೂರ ಪ್ರಾಥಮಿಕ ಕೃಷಿ ಪತ್ತಿನ ಸಹಾಕರ ಸಂಘದಲ್ಲಿ ಹಣ ದುರುಪಯೋಗ ಆಗಿದೆ ಅಂತ ಸಾರ್ವಜನಿಕರಾದ ಶಾಂತಗೌಡ ಹಾಗೂ ಇತರರು ನಮ್ಮ ಕಾರ್ಯಲಾಯಕ್ಕೆ ಅರ್ಜಿ ನೀಡಿದ್ದರು ಎಂದರೆ ನನಗೆ ಈ ಪ್ರಕರಣ ದಾಖಲಿಸುವಂತೆ ಅಧಿಕಾರ ಪತ್ರ ನೀಡಿದಾಗ ಈ ವಿಷಯ ಗೊತ್ತಾಯಿತು. ಪ್ರಾಥಮಿಕ ಕೃಷಿ ಪತ್ತಿನ ಸಹಾಕರ ಸಂಘದಲ್ಲಿ ಅಧ್ಯಕ್ಷರು ಹಾಗೂ ಕಾರ್ಯದರ್ಶಿಗಳು ಕೂಡಿ ಹಣ ಡ್ರಾ ಮಾಡಲು ಅಧಿಕಾರ ಇರುತ್ತದೆ ಎಂದರೆ ಸರಿ. ದಿ.23.10.2013 ರಂದು ಸಹಾಕರ ಸಂಘಗಳ ಸಹಾಯಕರ ನಿಬಂದಕರು ಯಾದಗಿರಿಯವರು ಈ ಬಗ್ಗೆ ಸಂಘದ ಸಾಮಾನ್ಯ ವಿಚಾರಣೆ ಮಾಡಿದರು ಎಂದರೆ ನನಗೆ ಗೊತ್ತಿಲ್ಲ.

**ಈ ಹಂತದಲ್ಲಿ ಸಾಕ್ಷಿಯು ಮುಂದಿನ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿದ್ದರಿಂದ ನೀಡಲಾಯಿತು.**

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಪ್ರಕಾರ ಬೆರಳಚ್ಚು ಮಾಡಲಾಯಿತು)

ಓ. ಹೇ.ಕೇ. ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು,
ಶೋರಾಪುರ.